ಓ ಎಸ್ ನಂ. 4/2016

ಪಿ ಡಬ್ಲ್ಯು 1

ದಿನಾಂಕ 07-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ 13(ಎ) ರಿಂದ (ಸಿ)ಗಳ ಪರಃ ಶ್ರೀ ಬಿ ಎಂ ಪಿ ವಕೀಲರಿಂದಃ

13 ನೇ ಪ್ರತಿವಾದಿ ಪ್ರತಿವಾದ ಪತ್ರದ ಐಟಂ ನಂ.8 ರ ಸ್ವತ್ತಿನ ಮೇಲೆ ಕಡೂರಿನ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ ನಂ.358/2008 ರಂತೆ ಒಂದು ದಾವೆ ಹೂಡಿದ್ದರು ಎಂದರೆ ಸರಿ. ಸದರಿ ಸ್ವತ್ತಿನ ಸಂಖ್ಯೆ 940/903 ಎಂದರೆ ಸರಿ. ಸದರಿ ದಾವೆ ವಜಾ ಆಗಿರುತ್ತದೆ ಹಾಗೂ ನನ್ನ ಪರವಾಗಿ ಆದೇಶವಾಗಿರುತ್ತದೆ. ಸದರಿ ದಾವೆಯ ಆದೇಶದ ವಿರುದ್ದ 13 ನೇ ಪ್ರತಿವಾದಿ ಈ ನ್ಯಾಯಾಲಯದಲ್ಲಿ ಆರ್ ಎ ನಂ.99/2009 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿ 2010 ನೇ ಇಸವಿಯಲ್ಲಿ ವಜಾಗೊಂಡಿರುತ್ತದೆ, ಏನು ಆದೇಶವಾಗಿರುತ್ತದೆ ಎಂದು ನನಗೆ ಈಗ ನೆನಪಿಲ್ಲ. ಸದರಿ ಮೇಲ್ಮನವಿಯನ್ನು ಮೇಲ್ಕಂಡ ಆಸ್ತಿಗೆ ಸಂಬಂದಪಟ್ಟಂತೆ ನಿರ್ಬಂದಕಾಜ್ಞೆ ಆದೇಶಕ್ಕೆ ದಾವೆ ಹಾಂಡಲು ಬರುವುದಿಲ್ಲ, ಪಾಲು ವಿಭಾಗಕ್ಕಾಗಿ ದಾವೆ ಹೂಡಬೇಕು ಎಂದು ಆದೇಶವಾಗಿದೆ ಎಂದರೆ ಸುಳ್ಳು. ಸದರಿ ಆದೇಶದ ಪ್ರತಿಯನ್ನು ನಾನು ನಮ್ಮ ವಕೀಲರಿಂದ ಪಡೆದು ಓದಿರುತ್ತೇನೆ ಎದಂರೆ ಸರಿ. ಸಾಕ್ಷಿ ಮುಂದುವರೆದು ಆದೇಶವಾದಾಗ ಪಡೆದು ಓದಿರುತ್ತೇನೆ ಎಂದು ನುಡಿದಿರುತ್ತಾರೆ. ಈ ನ್ಯಾಯಾಲಯದ ಆದೇಶದ ವಿರುದ್ದ 13 ನೇ ಪ್ರತಿವಾದಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್ ಎಸ್ ಎ ನಂ.1287/2014 ರಂತೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿ ಇದ್ದಾಗ ನಾನು ಈ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇನೆ

ಎಂದರೆ ಸರಿ. ಪ್ರಸ್ತುತ ದಾವೆಯನ್ನು ದಾವೆಯಲ್ಲಿ ಕಾಣಿಸಿರುವ ಸ್ವತ್ತುಗಳಿಗೆ ಸಂಬಂದಪಟ್ಟಂತೆ ವಿಭಾಗ ಕೋರಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ 13 ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ಕಾಣಿಸಿರುವ ಐಟಂ ನಂ.8 ರ ಆಸ್ತಿಯನ್ನು ಸೇರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ನನ್ನ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ ಈ ದಾವೆಯಲ್ಲಿ ಸೇರಿಸಿಲ್ಲ ಎಂದು ನುಡಿದಿರುತ್ತಾರೆ. ಸದರಿ ಸ್ವತ್ತು ನನ್ನ ಸ್ವಯಾರ್ಜಿತ ಆಸ್ತಿ ಎಂಬುದಾಗಿ ಈ ನ್ಯಾಯಾಲಯದಲ್ಲಿ ಆದೇಶವಾಗಿರುತ್ತದೆ. ಸದರಿ ಆದೇಶದ ಪ್ರತಿಗಳನ್ನು ನಾನು ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ನಾನು ಪ್ರಸ್ತುತ ದಾವೆಯನ್ನು ಹೂಡಿದ ನಂತರದಲ್ಲಿ 13 ನೇ ಪ್ರತಿವಾದಿ ಈ ದಾವೆಯಲ್ಲಿಯೇ ತಾನು ಕೋರಿದ್ದ ಪರಿಹಾರದ ಬಗ್ಗೆ ಆದೇಶ ಪಡೆಯವುದಾಗಿ ತಾನು ಸಲ್ಲಿಸಿದ್ದ ಆರ್ ಎಸ್ ಎ ನಂ.1287/2014 ರ ಮೇಲ್ಮನವಿಯನ್ನು ಉಚ್ಚ ನ್ಯಾಯಾಲಯದಿಂದ ಹಿಂಪಡೆದಿರುತ್ತಾರೆ ಎಂದರೆ ಸಾಕ್ಷಿ ಹಿಂಪಡೆದಿರುವುದು ಸರಿ, ಆದರೆ ಯಾವ ಕಾರಣಕ್ಕೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಯಾವ ಕಾರಣಕ್ಕೆ ಸದರಿ ಮೇಲ್ಮನವಿಯನ್ನು ಹಿಂಪಡೆಯಲಾಗಿದೆ ಎಂಬ ವಿಚಾರವನ್ನು ನಮ್ಮ ವಕೀಲರ ಬಳಿ ಕೇಳಿ ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿದಿರುತ್ತಾರೆ.

ನಾನು ಪ್ರಸ್ತುತ ದಾವೆಯನ್ನು ಹೂಡುವ ಕಾಲದಲ್ಲಿ ದಾವಾ ಆಸ್ತಿಗಳಲ್ಲಿ ಯಾವುದೇ ವಿಭಾಗ ಆಗಿರಲಿಲ್ಲ ಎಂದರೆ ಸರಿ. ಒಂದೇ ಸ್ವತ್ತಿಗೆ ಸಂಬಂದಪಟ್ಟಂತೆ ಎರಡು ನ್ಯಾಯಾಲಯಗಳಲ್ಲಿ ಪ್ರಕರಣ ನಡೆಸಬಾರದೆಂಬ ಉದ್ದೇಶದಿಂದ 13 ನೇ ಪ್ರತಿವಾದಿ ಆರ್ ಎಸ್ ಎ ನಂ.1287/2014 ರ ಮೇಲ್ಮನವಿಯನ್ನು ಹಿಂಪಡೆದಿರುತ್ತಾರೆ ಎಂದರೆ ಸಾಕ್ಷಿ ಅದು ಅವರ ಇಚ್ಚೆಗೆ ಬಿಟ್ಟಿದ್ದು ಎಂದು ನುಡಿದಿರುತ್ತಾರೆ. 13 ನೇ ಪ್ರತಿವಾದಿಯ ಪ್ರತಿವಾದ ಪತ್ರದ

ಐಟಂ ನಂ.8 ರ ಆಸ್ತಿಯು ಒಟ್ಟು ಕುಟುಂಬದ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸ್ವತ್ತು ನನ್ನ ಸ್ವಯಾರ್ಜಿತ ಆಸ್ತಿ ಎಂಬುದಾಗಿ ಘೋಷಣಾತ್ಮಕ ಆದೇಶವಾಗಿದೆ ಎಂದು ನುಡಿದಿರುತ್ತಾರೆ. ಓ ಎಸ್ ನಂ.358/2008 ರ ದಾವೆಯನ್ನು 13 ನೇ ಪ್ರತಿವಾದಿ ಕೇವಲ ಶಾಶ್ವತ ನಿರ್ಬಂದಕಾಜ್ಞೆ ಆದೇಶಕ್ಕಾಗಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ.

<u>ಪಾಟೀ ಸವಾಲುಃ</u> 14 <u>ನೇ ಪ್ರತಿವಾದಿ ಪರಃ ಶ್ರೀ ಕೆ ಎ ವಕೀಲರಿಂದಃ</u>

ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.